ಕರ್ನಾಟಕ ಸರ್ಕಾರ

ನವೆಂಬರ್ 23, 2017

# ನಮ್ಮ ಸರ್ಕಾರವು ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿಲ್ಲ, ತಾರತಮ್ಯ ಮಾಡಿಲ್ಲ : ಸಿದ್ದರಾಮಯ್ಯ



**ಬೆಂಗಳೂರು, ನವೆಂಬರ್ 23:**

ತಮ್ಮ ಸರ್ಕಾರವು ಉತ್ತರ ಕರ್ನಾಟಕಕ್ಕೆ ಯಾವುದೇ ಅನ್ಯಾಯವನ್ನೂ ಮಾಡಿಲ್ಲ. ಅಷ್ಟೇ ಅಲ್ಲ ! ಯಾವುದೇ ತಾರತಮ್ಯವನ್ನೂ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ವಿಧಾನ ಸಭೆಯಲ್ಲಿ ಗುರುವಾರ ಸ್ಪಷ್ಟಪಡಿಸಿದರು.

ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಮಹದಾಯಿ ನದಿ ನೀರು ಹಂಚಿಕೆ, ಕಳಸಾ–ಬಂಡೂರಿ ನಾಲಾ, ಪ್ರಾದೇಶಿಕ ಅಸಮತೋಲನಾ ನಿವಾರಣೆ ಕುರಿತ ಡಾ ಡಿ ಎಂ ನಂಜುಂಡಪ್ಪ ಅವರ ವರದಿ ಅನುಷ್ಠಾನ ಒಳಗೊಂಡಂತೆ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ ಕುರಿತು ಸದನದಲ್ಲಿ ನಡೆದ ಎರಡು ದಿನಗಳ ಚರ್ಚೆಗೆ ಅವರು ಉತ್ತರಿಸುತ್ತಿದ್ದರು.

ವಿವಿಧ ಇಲಾಖೆಗಳ ಅಭಿವೃದ್ಧಿಯ ಅಂಕಿ–ಅಂಶಗಳು ಹಾಗೂ ಪ್ರಗತಿ ವಿವರಗಳನ್ನು ಸದನದ ಮುಂದಿಟ್ಟು ಪ್ರತಿಪಾದಿಸಿದ ಅವರು ಸಾಮಾಜಿಕ ನ್ಯಾಯದ ತಳಹದಿಯಲ್ಲಿ ಸಮ–ಸಮಾಜ ನಿರ್ಮಾಣ ಮಾಡುವ ಸದುದ್ದೇಶ ತಮ್ಮ ಸರ್ಕಾರದ್ದಾಗಿದೆ. ಈ ನಿಟ್ಟಿನಲ್ಲಿ ತಾವು ಅತ್ಯಂತ ಪ್ರಾಮಾಣಿಕವಾಗಿ ಹಾಗೂ ಬದ್ಧತೆಯಿಂದ ಕಾರ್ಯ ನಿರ್ವಹಿಸುವುದಾಗಿ ಸಿದ್ದರಾಮಯ್ಯ ಅವರು ಸದನಕ್ಕೆ ಭರವಸೆ ನೀಡಿದರು.

ಈ ವಿಧಾನಸಭೆಯ ಅವಧಿಯಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿರುವ ಕೊನೆಯ ಅಧಿವೇಶನ ಇದಾಗಿದೆ. ಇದರಲ್ಲಿ ಮುಖ್ಯವಾಗಿ ಉತ್ತರ ಕರ್ನಾಟಕದ ಭಾಗದ ಸಮಸ್ಯೆಗಳ ಬಗ್ಗೆ ಹೆಚ್ಚು ಚರ್ಚೆ ನಡೆಯಬೇಕು. ಜೊತೆಗೆ, ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಳ್ಳಬೇಕು ಎನ್ನುವ ಸದುದ್ದೇಶದಿಂದ ಸುವರ್ಣಸೌಧವನ್ನು ನಿರ್ಮಿಸಿ ರಾಜ್ಯ ವಿಧಾನ ಮಂಡಲದ ಒಂದು ಅಧಿವೇಶನವನ್ನು ಪ್ರತಿ ವರ್ಷವೂ ನಡೆಸುತ್ತಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಡೆಯುತ್ತಿರುವ ಐದನೇ ಅಧಿವೇಶನ ಇದಾಗಿದೆ.

## ವರ್ಷದಿಂದ ವರ್ಷಕ್ಕೆ ಅಸಮಾಧಾನ–ಅತೃಪ್ತಿ ಕಡಿಮೆ

ಮೊದಲ ಅಧಿವೇಶನ ಮತ್ತು ಐದನೇ ಅಧಿವೇಶನದವರೆಗೆ ಸಾಗಿ ಬಂದ ಹಾದಿಯನ್ನು ಒಮ್ಮೆ ಅವಲೋಕಿಸಿದಾಗ ಕೆಲವು ಬೆಳವಣಿಗೆಗಳು ಸ್ಪಷ್ಟವಾಗಿ ಕಾಣುತ್ತದೆ. ಸಾಮಾನ್ಯವಾಗಿ ಸರ್ಕಾರವೊಂದು ಐದು ವರ್ಷ ಪೂರ್ಣಗೊಳಿಸುವಾಗ ಜನತೆಯ ಅಸಮಾಧಾನ ಹೆಚ್ಚಿರುತ್ತದೆ, ಇದರಿಂದಾಗಿ ಸಾರ್ವಜನಿಕ ಚಳುವಳಿಗಳು, ಪ್ರತಿಭಟನೆಗಳು ಹಾಗೂ ಹೋರಾಟಗಳು ಹೆಚ್ಚಾಗಿ ನಡೆಯುತ್ತವೆ. ಇದು ನಮ್ಮೆಲ್ಲರ ಈವರೆಗಿನ ಅನುಭವ. ಆದರೆ, ರಾಜ್ಯದ ಜನರೇ ಗಮನಿಸಿದಂತೆ ನಮ್ಮ ಸರ್ಕಾರ ನಾಲ್ಕೂವರೆ ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದೆ. ವರ್ಷದಿಂದ ವರ್ಷಕ್ಕೆ ಜನರ ಅಸಮಾಧಾನ, ಅತೃಪ್ತಿಗಳು ಕಡಿಮೆಯಾಗುತ್ತಿವೆ.

## ಆಡಳಿತ ವಿರೋಧಿ ಅಲೆ ಇಲ್ಲ ! ಆಡಳಿತ ಪರ ಅಲೆ ಇದೆ !

ನಾಲ್ಕೂವರೆ ವರ್ಷಗಳ ಆಡಳಿತದ ನಂತರವೂ, ರಾಜ್ಯದಲ್ಲಿ ಎಲ್ಲೂ ಸರ್ಕಾರಿ ವಿರೋಧಿ ಅಲೆ ಇಲ್ಲ ಮತ್ತೊಂದು ಗಮನಾರ್ಹ ಅಂಶ ಎಂದರೆ ವಿರೋಧಿ ಅಲೆಯ ಬದಲಾಗಿ ಆಡಳಿತದ ಪರವಾದ ಅಲೆ ಕಾಣುತ್ತಿದೆ ಎಂದು ಮುಖ್ಯಮಂತ್ರಿ ಬಣ್ಣಿಸಿದರು.

## ಜನ ನಮ್ಮ ಪರ ಎಂಬುದಕ್ಕೆ ಸಾಕ್ಷಿ

ಈ ಬಾರಿ ಸುವರ್ಣಸೌಧದ ಮುಂಭಾಗ ಮತ್ತು ಅಕ್ಕಪಕ್ಕದ ಪ್ರದೇಶ ಶಾಂತವಾಗಿದೆ. ಕೆಲವು ಯಾತ್ರೆಗಳ ಗದ್ದಲ ಹೊರತುಪಡಿಸಿದರೆ ಇಡೀ ರಾಜ್ಯ ಕೂಡಾ ಶಾಂತವಾಗಿದೆ. ವೈದ್ಯರು ಒಂದಷ್ಟು ದಿನ ಪ್ರತಿಭಟನೆ ನಡೆಸಿದರೂ ಆ ಸಮಸ್ಯೆ ಕೂಡಾ ನಿವಾರಣೆಯಾಗಿದೆ. ಕೆಲವರ ಕುಮ್ಮಕ್ಕಿನ ಹೊರತಾಗಿಯೂ ಯಾವುದೇ ದೊಡ್ಡ ಪ್ರಮಾಣದ ಪ್ರತಿಭಟನೆ, ಚಳುವಳಿ, ಧರಣಿ, ಘೇರಾವ್‌ಗಳು ನಡೆದಿಲ್ಲ. ನಮ್ಮ ಸರ್ಕಾರದ ಸಾಧನೆ ಮತ್ತು ನಡವಳಿಕೆ ಬಗ್ಗೆ ರಾಜ್ಯದ ಜನ ತೃಪ್ತರಾಗಿದ್ದಾರೆ, ಅವರು ನಮ್ಮ ಪರವಾಗಿದ್ದಾರೆ ಎನ್ನುವುದಕ್ಕೆ ಇದಕ್ಕಿಂತಲೂ ಬೇರೆ ಸಾಕ್ಷಿ ಬೇಕಿಲ್ಲ ಎಂದರು.

ಬಹಳ ಮುಖ್ಯವಾಗಿ ಇಲ್ಲಿ ಡಾ ಡಿ. ಎಂ. ನಂಜುಂಡಪ್ಪ ವರದಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ಮುಂದಿಟ್ಟು ಕೊಂಡು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ನಡೆದಿದೆ. ಆಧಾರ ರಹಿತ ಆರೋಪಗಳು ಮತ್ತು ತಪ್ಪು ಅಂಕಿ ಅಂಶಗಳ ಮೂಲಕ ಜನತೆಯನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವನ್ನು ಪ್ರತಿಪಕ್ಷಗಳ ಸದಸ್ಯರು ಮಾಡಿದ್ದಾರೆ. ಆದರೆ ಜನ ಜಾಣರಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದರು.

## ಹೈ-ಕ ಅಭ್ಯರ್ಥಿಗಳಿಗೆ 3,177 ವೈದ್ಯಕೀಯ ಸೀಟುಗಳು

ಹೈದರಾಬಾದ್ ಕರ್ನಾಟಕ ಸಂಪೂರ್ಣ ಅಭಿವೃದ್ಧಿ ಆಗಿದೆ ಎಂದು ಹೇಳುವುದಿಲ್ಲ. ಆದರೆ, ಅಭಿವೃದ್ಧಿ ಕಾಮಗಾರಿಗಳು ಪ್ರಾರಂಭವಾಗಿವೆ. ಆದರೆ, 3,750 ಕೋಟಿ ರೂ ಅನುದಾನ ಬಿಡುಗಡೆಯಾಗಿದೆ. ಯುವಕ-ಯುವತಿಯರಿಗೆ ಉದ್ಯೋಗದಲ್ಲಿ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಿರುವ ಹಿನ್ನೆಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ 3,177 ವೈದ್ಯಕೀಯ ಸೀಟುಗಳನ್ನು ಈ ಭಾಗದ ಅಭ್ಯರ್ಥಿಗಳು ಪಡೆದು ಕೊಂಡಿದ್ದಾರೆ ಎಂದು ಸಿದ್ದರಾಮಯ್ಯ ಅವರು ಮಾಹಿತಿ ನೀಡಿದರು.

## ಮೌಲ್ಯ ಮಾಪನಕ್ಕೆ ಸೂಚನೆ

ವಿಶೇಷ ವಿಶೇಷ ಅಭಿವೃದ್ಧಿ ಯೋಜನೆಯ ಫಲಶೃತಿಯ ಮೌಲ್ಯಮಾಪನ ಕಾರ್ಯವನ್ನು ಸೆಂಟರ್ ಫಾರ್ ಮಲ್ಟಿ ಡಿಸೆಪ್ಲಿನರಿ ರೀಸರ್ಚ್ ( ಸಿ ಎಂ ಡಿ ಆರ್ ) ಸಂಸ್ಥೆಗೆ ಮಾರ್ಚ್-2013 ರಲ್ಲಿ ವಹಿಸಲಾಗಿತ್ತು. ಈ ಸಂಸ್ಥೆಯು ತನ್ನ ಅಂತಿಮ ವರದಿಯನ್ನು 2016 ರಲ್ಲಿ ನೀಡಿದೆ. ಈ ವರದಿಯನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ ( ಐ-ಸೆಕ್ ) ಯ ಪರಿಶೀಲನೆಗೆ ಒಪ್ಪಿಸಲಾಗಿತ್ತು. ಮೌಲ್ಯ ಮಾಪನದಲ್ಲಿ 2010-11 ನೇ ಸಾಲಿನ ಅವಧಿಯವರೆಗಿನ ಸಾಧನೆಗಳನ್ನು ಮಾತ್ರ ಪರಿಗಣಿಸಿರುವುದರಿಂದ 2017-18 ನೇ ಸಾಲಿನ ವರೆಗಿನ ಯೋಜನೆಯ ಫಲಶೃತಿಯ ಮೌಲ್ಯಮಾಪನವನ್ನು ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಳ್ಳಲು ಯೋಜನಾ ಇಲಾಖೆಗೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

## ವಿವಿಧ ಹಂತಗಳಲ್ಲಿ ನೇಮಕಾತಿ ಪ್ರಕ್ರಿಯೆ

ಸಂವಿಧಾನ ಪರಿಚ್ಛೇಧ 371 ( ಜೆ ) ಸಂಬಂಧ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ನೇರ ನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಈವರೆಗೆ 107 ಕ್ಷೇತ್ರ ಇಲಾಖೆಗಳ ಪೈಕಿ 84 ಕ್ಷೇತ್ರ ಇಲಾಖೆಗಳು ಹಾಗೂ 343 ನಿಗಮ-ಮಂಡಳಿಗಳ ಪೈಕಿ 136 ನಿಗಮ-ಮಂಡಳಿಗಳಲ್ಲಿ ಮೀಸಲಾತಿ ನಿಗಧಿಪಡಿಸಿ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಮೀಸಲಿರಿಸಿರುವ

**1,69,254 ಹುದ್ದೆಗಳ ಪೈಕಿ 1,03,408 ಹುದ್ದೆಗಳನ್ನು ಕಾರ್ಯ ನಿರ್ವಹಿಸುತ್ತಿರುವ ನೌಕರರ ಹಂಚಿಕೆ ಮಾಡಿ ಭರ್ತಿ ಮಾಡಲಾಗಿದೆ. ಉಳಿದ ಸುಮಾರು 55,000 ಖಾಲಿ ಹುದ್ದೆಗಳ ಪೈಕಿ ಈವರೆಗೆ 18,993 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಬಾಕಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ವಿವಿಧ ಹಂತಗಳಲ್ಲಿವೆ ಎಂದು ಸಿದ್ದರಾಮಯ್ಯ ಅವರು ವಿವರ ನೀಡಿದರು.**

**ಮಾರ್ಚ್ ಒಳಗೆ ಸಂಪೂರ್ಣ ಬಯಲು ಬಹಿರ್ದಸೆ ಮುಕ್ತ**

**ಮುಂದಿನ ವರ್ಷ ಮಾರ್ಚ್ 31 ರೊಳಗಾಗಿ ರಾಜ್ಯದ 30 ಜಿಲ್ಲೆಗಳ 176 ತಾಲ್ಲೂಕುಗಳ ಆರು ಸಾವಿರ ಗ್ರಾಮ ಪಂಚಾಯತ್‌ಗಳನ್ನು ಬಯಲು ಬಹಿರ್ದಸೆ ಮುಕ್ತ ಮಾಡುವ ಗುರಿ ಹೊಂದಲಾಗಿದೆ. ಉತ್ತರ ಕರ್ನಾಟಕದ ಐದು ಜಿಲ್ಲೆಗಳು ಈಗಾಗಲೇ ಸಂಪೂರ್ಣ ಬಯಲು ಬಹಿರ್ದಸೆ ಮುಕ್ತವಾಗಿವೆ.**

**ಉತ್ತರ ಕರ್ನಾಟಕದಲ್ಲಿ 163 ಬಹು ಗ್ರಾಮ ಕುಡಿಯುವ ನೀರು ಯೋಜನೆಗಳು ಹಾಗೂ 5582 ಕೊಳವೆ ನೀರು ಸರಬರಾಜು ಹಾಗೂ 6573 ಕಿರು ನೀರು ಸರಬರಾಜು ಯೋಜನೆಗಳು ಜಾರಿ**

**ರಾಜ್ಯದ 2271.86 ಕೋಟಿ ರೂ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ರೂಪಿಸಿರುವ 234 ಬಹು ಗ್ರಾಮ ಕುಡಿಯುವ ನೀರು ಯೋಜನೆಗಳ ಪೈಕಿ 1466.93 ಕೋಟಿ ರೂ. ವೆಚ್ಚದಲ್ಲಿ 163 ಯೋಜನೆಗಳನ್ನು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಅದೇ ರೀತಿ ರಾಜ್ಯದಲ್ಲಿ 8407 ಕೊಳವೆ ನೀರು ಸರಬರಾಜು ಯೋಜನೆಗಳು ಅನುಷ್ಠಾನಗೊಂಡಿದ್ದು, ಇವುಗಳಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ 5582 ಯೋಜನೆಗಳು ಜಾರಿಯಾಗಿವೆ. ಅಂತೆಯೇ, ರಾಜ್ಯದಲ್ಲಿ ಕಿರು ನೀರು ಸರಬರಾಜು ಯೋಜನೆಗಳು 10150 ಅನುಷ್ಠಾನಗೊಂಡಿದ್ದು, ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ 6573 ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ ಎಂದು ಅವರು ಹೇಳಿದರು.**

**ನಮ್ಮ ಸರ್ಕಾರವು 2013–14 ನೇ ಸಾಲಿನಿಂದ ಇಲ್ಲಿಯವರೆಗೆ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗಾಗಿ ರಾಜ್ಯದಲ್ಲಿ 9291.11 ಕೊಟಿ ರೂ. ವೆಚ್ಚ ಮಾಡಲಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ 4718.90 ಕೋಟಿ ರೂ. ವೆಚ್ಚ ಮಾಡಲಾಗಿದೆ. ಉತ್ತರ ಕರ್ನಾಟಕ ಭಾಗದ ಶ್ರೀ ಕ್ಷೇತ್ರ ಯಲ್ಲಮ್ಮ ದೇವಸ್ಥಾನಕ್ಕೆ 31.20 ಕೋಟಿ ರೂ. ಮೊತ್ತದ ಕುಡಿಯುವ ನೀರಿನ ಯೋಜನೆಯನ್ನು ಅನುಮೋದನೆ ನೀಡಿ ಯಾತ್ರಾರ್ಥಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 10,106 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕಾರ್ಯಾಚರಣೆಗೊಳಿಸಲಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ 5212 ಘಟಕಗಳನ್ನು ಕಾರ್ಯಾಚರಣೆಗೊಳಿಸಲಾಗಿದೆ.**

**ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಈವರೆಗೆ ರಾಜ್ಯದಲ್ಲಿ ಒಟ್ಟು 4501.47 ಕೋಟಿ ರೂ. ಗಳಲ್ಲಿ 9545 ಕಿ.ಮೀ ರಸ್ತೆಗಳನ್ನು ಅಭಿವೃದ್ಧಿಪಡಿಸಿದ್ದು, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ 2101.26 ಕೋಟಿ ರೂ. ವೆಚ್ಚ ಮಾಡಿ ಶೇಕಡಾ 46.67 ರಷ್ಟು 4576.45 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯ ನಾಲ್ಕನೇ ಹಂತದಲ್ಲಿ ರಾಜ್ಯದಲ್ಲಿ 3982 ಕೋಟಿ ರೂ. ಮೊತ್ತದ 4,385 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಲು ಅನುಮೋದನೆ ನೀಡಿದ್ದು, ಇದರಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ 1951.23 ಕೋಟಿ ರೂ. ಮೊತ್ತದ 2030.09 ಕಿ.ಮೀ. ಅನುಮೋದನೆ ನೀಡಲಾಗಿದೆ.**

**ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ನಮ್ಮ ಸರ್ಕಾರವು ರಾಜ್ಯದಲ್ಲಿ ಒಟ್ಟು 1131.09 ಕೋಟಿಗಳಲ್ಲಿ 2592.64 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಿದ್ದು, ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ 518.39 ಕೋಟಿ ವೆಚ್ಚದ 1256.89 ಕಿ.ಮೀ. ರಸ್ತೆ ಅಭಿವೃದ್ದಿಪಡಿಸಲಾಗಿದೆ.**

**2012-13ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯ ಸಮೀಕ್ಷೆ ಪ್ರಕಾರ ಉತ್ತರ ಕರ್ನಾಟಕ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ 5.09 ಲಕ್ಷ (17%) ಕುಟುಂಬಗಳು ಶೌಚಾಲಯ ಹೊಂದಿದ್ದು, ನಮ್ಮ ಸರ್ಕಾರವು 14.81 ಲಕ್ಷ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿ, ಶೇಕಡಾ 65 ಕ್ಕೆ ಹೆಚ್ಚಿಸಲಾಗಿದೆ. ಉಳಿದ 10.98 ಲಕ್ಷ ಕುಟುಂಬಗಳ ಪೈಕಿ 7.25 ಲಕ್ಷ ಶೌಚಾಲಯ ನಿರ್ಮಾಣ ಕಾರ್ಯ ಪ್ರಗತಿಯ ಹಂತದಲ್ಲಿದೆ.**

**ರಾಜ್ಯದಲ್ಲಿ ನೂತನವಾಗಿ ರಚನೆಯಾಗಿರುವ 462 ಗ್ರಾಮ ಪಂಚಾಯಿತಿಗಳ ಪೈಕಿ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ರಚನೆಯಾಗಿರುವ ಗ್ರಾಮ ಪಂಚಾಯಿತಿಗಳು 297. ಅವುಗಳ ಮೂಲ ಸೌಕರ್ಯ ವ್ಯವಸ್ಥೆಗಾಗಿ ಒಟ್ಟಾರೆ ಅನುದಾನ 13.86 ಕೋಟಿ ರೂ ಪೈಕಿ ಉತ್ತರ ಕರ್ನಾಟಕ ಜಿಲ್ಲೆಗಳಿಗೆ 8.91 ಕೋಟಿ ರೂ ನೀಡಲಾಗಿದೆ. ಅದೇ ರೀತಿ ಕಟ್ಟಡಗಳ ನಿರ್ಮಾಣಕ್ಕಾಗಿ ಉತ್ತರ ಕರ್ನಾಟಕ ಜಿಲ್ಲೆಗಳಿಗೆ 19.90 ಕೋಟಿ ರೂ ಒದಗಿಸಲಾಗಿದೆ. ರಾಜ್ಯಾದ್ಯಂತ ನಡೆಯುತ್ತಿರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ-ಕಾರ್ಯದರ್ಶಿಗಳಲ್ಲಿ 727 ಹುದ್ದೆಗಳು ಉತ್ತರ ಕರ್ನಾಟಕ ಭಾಗಕ್ಕೆ ನಡೆಸಲಾಗುತ್ತಿದೆ.**

2008-09 ನೇ ಸಾಲಿನಿಂದ 2012-13 ನೇ ಸಾಲಿನವರೆಗೆ ಜಲಸಂಪನ್ಮೂಲ ಇಲಾಖೆಗೆ ಒಟ್ಟು 23,724.18 ಕೋಟಿ ರೂ ಆಯವ್ಯಯ ಹಂಚಿಕೆಯಾಗಿದ್ದು, 18,769.64 ಕೋಟಿ ರೂ ವೆಚ್ಚ ಮಾಡಲಾಗಿದೆ. ಇದರಿಂದ ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ-2.24 ಲಕ್ಷ ಹೆಕ್ಟೇರ್. ಆದರೆ,

2013–14ರಿಂದ 2017–18 ರವರೆಗೆ ನಮ್ಮ ಸರ್ಕಾರವು ರೂ.58,393.51 ಕೋಟಿ ಹಂಚಿಕೆ ಮಾಡಿದ್ದು, 41,621.82 ಕೋಟಿ ರೂ. ವೆಚ್ಚ ಮಾಡಲಾಗಿದೆ **(ಎಸ್.ಸಿ.ಪಿ/ಟಿ.ಎಸ್.ಪಿ.8582.58 ರೂ, Debt Service.2967.35 ಕೋಟಿ ರೂ, ಒಟ್ಟು.11,550 ಕೋಟಿ ರೂ)**. ಇದರಿಂದ ಸೃಷ್ಟಿಸಲಾದ ನೀರಾವರಿ ಸಾಮರ್ಥ್ಯ 2.63 ಲಕ್ಷ ಹೆಕ್ಟೇರ್. **ಇದರಲ್ಲಿ ಉತ್ತರ ಕರ್ನಾಟಕದ ಯೋಜನೆಗಳಿಗೆ 19,662.40 ಕೋಟಿ ರೂ. (65%) ವೆಚ್ಚ ಮಾಡಿ 2,12,153 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ (80.57%)**

ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತ ಸೇರಿದಂತೆ ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಸುಮಾರು 18 ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಸುಮಾರು 47 ಹೊಸ ಯೋಜನೆಗಳನ್ನು ರೂಪಿಸಿದ್ದು, ಪೂರ್ಣಗೊಳಿಸಲು ಸುಮಾರು 70,000 ಕೋಟಿ ಹಣ ಬೇಕಾಗಬಹುದೆಂದು ಅಂದಾಜಿಸಲಾಗಿದೆ ಮತ್ತು ಅವುಗಳಿಂದ ಸುಮಾರು 10 ಲಕ್ಷ ಹೆಕ್ಟೇರ್ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

2013 ರ ಭೂಸ್ವಾಧೀನ ಕಾಯ್ದೆಯ ಹಿನ್ನೆಲೆಯಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಹಂತ–3ರ ಪರಿಷ್ಕೃತ ಅಂದಾಜು ಮೊತ್ತ 51,148.94 ಕೋಟಿ ರೂ. ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಇದಲ್ಲದೆ ಭದ್ರ ಮೇಲ್ದಂಡೆ, ಸಿಂಗಟಾಲೂರು ಯೋಜನೆಗಳಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಕೆಯಿಂದ, ಎತ್ತಿನ ಹೊಳೆ ಯೋಜನೆ ಪರಿಷ್ಕೃತ ಅಂದಾಜಿನ ಹೆಚ್ಚಳದಿಂದ, ರಾಜ್ಯದ ಎಲ್ಲಾ ಭಾಗಗಳಲ್ಲಿ ಹಂಚಿಕೆ ಮಾಡಲಾದ ನೀರಿನ ಸದ್ಬಳಕೆಗಾಗಿ ಹೊಸ ಯೋಜನೆಗಳನ್ನು, ಕೆರೆಗೆ ನೀರು ತುಂಬಿಸುವ ಮತ್ತು ಹಳೆಯ ಯೋಜನೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವ ಹಿನ್ನೆಲೆಯಲ್ಲಿ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಸುಮಾರು 1 ಲಕ್ಷ ಕೋಟಿ ಬೇಕಾಗಬಹುದೆಂದು ಅಂದಾಜಿಸಲಾಗಿದೆ.

ಮಹದಾಯಿ ಜಲ ವಿವಾದ ಸಂಬಂಧಿಸಿದಂತೆ ನ್ಯಾಯಮಂಡಳಿ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಯವರಿಂದಲೇ ಸಮಸ್ಯೆ ಬಗೆಹರಿಸಲು ಸಾಧ್ಯ ಯಾವುದೇ ಮುಖ್ಯಮಂತ್ರಿಗಳು ಪರಿಹರಿಸಲು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.

ಲೋಕೋಪಯೋಗಿ ಇಲಾಖೆಯ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಒಟ್ಟು 28,411 ಕಿ.ಮೀ. ಮತ್ತು ಉತ್ತರ & ಈಶಾನ್ಯ ವಲಯದಲ್ಲಿ 41,077 ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ಹಾಗೂ

ಜಿಲ್ಲಾ ಮುಖ್ಯ ರಸ್ತೆಗಳು ಇರುತ್ತವೆ. ನಮ್ಮ ಸರ್ಕಾರವು 2013–14ರಿಂದ ಅಕ್ಟೋಬರ್ 2017 ರ ಅಂತ್ಯದವರೆಗೆ ಉತ್ತರ ಕರ್ನಾಟಕದ ರಸ್ತೆ ಅಭಿವೃದ್ಧಿ ಮತ್ತು ಸೇತುವೆಗಳ ನಿರ್ಮಾಣಕ್ಕಾಗಿ ವಿವಿಧ ಯೋಜನೆಗಳಡಿ ಒಟ್ಟು 17,631.43 ಕೋಟಿ ರೂ ಅನುದಾನ ಒದಗಿಸಿದ್ದು, 21,739.02 ಕಿ.ಮೀ ರಸ್ತೆ ಅಭಿವೃದ್ಧಿ ಹಾಗೂ 525 ಸೇತುವೆಗಳ ಕಾಮಗಾರಿ ಕೈಗೊಳ್ಳಲಾಗಿದೆ. **ಅಂತೆಯೇ,** 6,761 ಕಿ.ಮೀ. ರಾಜ್ಯ ಹೆದ್ದಾರಿ (5,239 ಕೋಟಿ), 6,576 ಕಿ.ಮೀ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ / ನವೀಕರಣ (3,166 ಕೋಟಿ), ಕೆ–ಶಿಪ್‌ರಡಿ 1,551.54 ಕೋಟಿ ಮೊತ್ತದ 561.20 ಕಿ.ಮೀ ರಾಜ್ಯ ಹೆದ್ದಾರಿ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ.

ಕೇಂದ್ರ ರಸ್ತೆ ನಿಧಿ ಯೋಜನೆಯಡಿ 1104 ಕಿ.ಮೀ. ರಸ್ತೆ ಕಾಮಗಾರಿಗಳು ಮತ್ತು 14 ಸೇತುವೆಗಳ ಕಾಮಗಾರಿ (1,234.60 ಕೋಟಿ), ವಿಶೇಷ ಅಭಿವೃದ್ಧಿ ಯೋಜನೆಯಡಿ 1,028 ಕಿ.ಮೀ (283 ಕೋಟಿ), ರೂ.2,047 ಕೋಟಿ ವೆಚ್ಚದಲ್ಲಿ ಎಸ್.ಸಿ.ಪಿ ರಡಿ 1,047 ಕಿ.ಮೀ ಮತ್ತು ಟಿ.ಎಸ್.ಪಿ ಯೋಜನೆಯಡಿ 834 ಕಿ.ಮೀ. ಕಾಂಕ್ರಿಟ್ ರಸ್ತೆ ನಿರ್ಮಿಸಲಾಗಿದೆ. ಸಿಎಂಜಿಆರ್‌ವೈ ರಡಿ 1441 ಕಿ.ಮೀ ರಸ್ತೆ (270.29 ಕೋಟಿ), ಆರ್‌ಐಡಿಎಫ್ ಯೋಜನೆಯಡಿ 1,787 ಕಿ.ಮೀ ಗ್ರಾಮೀಣ ರಸ್ತೆ ಮತ್ತು 203 ಸೇತುವೆಗಳು (645 ಕೋಟಿ).

ಜಿಲ್ಲಾ ಮುಖ್ಯ ರಸ್ತೆ ಮತ್ತು ರಾಜ್ಯ ಹೆದ್ದಾರಿಗಳಲ್ಲಿ 179 ಸೇತುವೆಗಳ (227 ಕೋಟಿ), ಕೆಆರ್‌ಡಿಸಿಎಲ್ ವತಿಯಿಂದ 1008 ಕೋಟಿ ವೆಚ್ಚದಲ್ಲಿ 129 ಸೇತುವೆಗಳ ನಿರ್ಮಾಣ ಕೈಗೊಳ್ಳಲಾಗುತ್ತಿದೆ ಮತ್ತು 2016–17ನೇ ಸಾಲಿನಲ್ಲಿ 1960 ಕೋಟಿ ರೂ .ಮೊತ್ತದ ಅಪೆಂಡಿಕ್ಸ್–ಇ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

## ಸಾಲ ಮನ್ನಾ ಕೇಂದ್ರ ಸರ್ಕಾರದ ಮೇಲೆ ಒತ್ತಡ ತನ್ನಿ

**ರಾಜ್ಯದಲ್ಲಿ ಸಹಕಾರಿ ಬ್ಯಾಂಕ್‌ಗಳಿಂದ 22.27 ಲಕ್ಷ ರೈತರಿಗೆ 50,000 ರೂ ವರೆಗಿನ ಬೆಳೆ ಸಾಲ ಮನ್ನಾ ಮಾಡಲಾಗಿದೆ. 8165 ಕೋಟಿ ರೂ ಹಣ ಸಹಕಾರಿ ಬ್ಯಾಂಕ್‌ಗಳಿಗೆ ರಾಜ್ಯ ಸರ್ಕಾರ ಮರುಪಾವತಿ ಮಾಡಲಿದೆ. ರಾಜ್ಯದಲ್ಲಿ ವಾಣಿಜ್ಯ ಮತ್ತು ಇತರೆ ಬ್ಯಾಂಕ್‌ಗಳಿಂದ 42,000 ಕೋಟಿ ರೂ ಗಳಿಗೂ ಅಧಿಕ ಮೊತ್ತವನ್ನು ರೈತರು ಸಾಲ ಪಡೆದಿದ್ದಾರೆ ಈ ಮೊತ್ತವನ್ನು ಮನ್ನಾ ಮಾಡಬೇಕೆಂದು ಭಾರತೀಯ ಜನತಾ ಪಕ್ಷದ ನಾಯಕರು . ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಮುಖ್ಯಮಂತ್ರಿ ಒತ್ತಾಯಿಸಿದರು**

ರೈತನ ಶ್ರೇಯೋಭಿವೃದ್ಧಿಗಾಗಿ ಸಕಾಲದಲ್ಲಿ ಬಿತ್ತನೆ ಬೀಜ, ಗೊಬ್ಬರ ವಿತರಣೆ, ಮಣ್ಣಿನ ಆರೋಗ್ಯ ಕಾಪಾಡಲು–ಮಣ್ಣು ಆರೋಗ್ಯ ಚೀಟಿ ವಿತರಣೆ, ಸಾವಯವ ಕೃಷಿಗೆ ಉತ್ತೇಜನ, ಮಳೆಯಾಶ್ರಿತ ರೈತರಿಗೆ ಕೃಷಿ ಭಾಗ್ಯ, ಕೃಷಿ ಯಾಂತ್ರೀಕರಣ, ಲಘುನೀರಾವರಿಗೆ ಸರ್ಕಾರ ಆದ್ಯತೆ ನೀಡಿದೆ. ಒಟ್ಟಾರೆಯಾಗಿ ರೈತರ ಹಿತವನ್ನು ಕಾಪಾಡುವ ಉದ್ದೇಶದಿಂದ ಅನೇಕ ರೈತ ಸ್ನೇಹಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

2014–15ನೇ ಸಾಲಿನಿಂದ ಅಕ್ಟೋಬರ್ 2017ರ ಮಾಹೆಯ ಅಂತ್ಯದವರೆಗೆ ಒಟ್ಟು 1.82 ಲಕ್ಷ ಕೃಷಿ ಹೊಂಡಗಳನ್ನು ಹಾಗೂ 2460 ಪಾಲಿಹೌಸ್/ನೆರಳುಪರದೆಮನೆ ಘಟಕಗಳನ್ನು ನಿರ್ಮಾಣ ಮಾಡಿ ರೂ. 1698.73 ಕೋಟಿ ಅನುಧಾನವನ್ನು ವೆಚ್ಚ ಭರಿಸಲಾಗಿದೆ.

ಉತ್ತರ ಕರ್ನಾಟಕದ 12 ಜಿಲ್ಲೆಗಳಲ್ಲಿ 112974 ಕೃಷಿ ಹೊಂಡಗಳನ್ನು ಹಾಗೂ961 ಪಾಲಿಹೌಸ್/ನೆರಳುಪರದೆ ಮನೆ ಘಟಕಗಳನ್ನು ನಿರ್ಮಿಸಿ ಒಟ್ಟು 913.68 ಕೋಟಿ ರೂ. ಗಳನ್ನು ವಿನಿಯೋಗಿಸಲಾಗಿದೆ. ರಾಜ್ಯದಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ಎಲ್ಲಾ ವರ್ಗದ ರೈತರಿಗೆ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಶೇ.90 ರ ಸಹಾಯಧನವನ್ನು ನೀಡಲಾಗುತ್ತಿದೆ.

2013–14 ನೇ ಸಾಲಿನಿಂದ ಇಲ್ಲಿಯವರೆಗೆ 5.78 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ 1142.07 ಕೋಟಿ ರೂ ಅನುದಾನದಲ್ಲಿ 5.40 ಲಕ್ಷ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

ಉತ್ತರ ಕರ್ನಾಟಕದ 12 ಜಿಲ್ಲೆಗಳಲ್ಲಿ 2013–14ನೇ ಸಾಲಿನಿಂದ ಇಲ್ಲಿಯವರೆಗೆ 2.965 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ 619.21 ಕೋಟಿ ರೂ. ಅನುದಾನದ ವೆಚ್ಚ ಭರಿಸಲಾಗಿರುತ್ತದೆ. 2.50 ಲಕ್ಷ ರೈತರು ಇದರ ಪ್ರಯೋಜನ ಪಡೆದಿರುತ್ತಾರೆ.

2012–13 ನೇ ಸಾಲಿನಲ್ಲಿ 60,117 ಹೆಕ್ಟೇರ್ ಪ್ರದೇಶದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ 107.94 ಕೋಟಿ ರೂ ಅನುದಾನದಲ್ಲಿ 60,117 ಲಕ್ಷ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

2012–13 ನೇ ಸಾಲಿನಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ 49033 ಹೆಕ್ಟೇರ್ ಪ್ರದೇಶದಲ್ಲಿ ಹನಿ ಮತ್ತು ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ 77.069 ಕೋಟಿ ರೂ. ಅನುದಾನದ ವೆಚ್ಚ ಭರಿಸಲಾಗಿದೆ. 34143 ರೈತರು ಇದರ ಪ್ರಯೋಜನ ಪಡೆದಿರುತ್ತಾರೆ.

ಕಳೆದ ನಾಲ್ಕು ವರ್ಷಗಳಲ್ಲಿ ಅಂದರೆ 2013–14 ರಿಂದ 2017–18ನೇ ಸಾಲಿನ ಅಕ್ಟೋಬರ್ ಮಾಹೆಯ ಅಂತ್ಯದವರೆಗೂ ತೋಟಗಾರಿಕೆ, ಕೃಷಿ ಹಾಗೂ ರೇಷ್ಮೆ ಇಲಾಖೆಗಳು ಸೇರಿದಂತೆ ಒಟ್ಟು ರೂ.1030.31 ಕೋಟಿ ಮೊತ್ತವನ್ನು ವೆಚ್ಚ ಮಾಡಿ 418131 ಸಂಖ್ಯೆ ರೈತರಿಗೆ 8.99 ಲಕ್ಷ ಎಕರೆ ಪ್ರದೇಶಕ್ಕೆ ಸಹಾಯಧನವನ್ನು ಸೂಕ್ಷ್ಮ ನೀರಾವರಿ ಕಾರ್ಯಕ್ರಮದಡಿ ನೀಡಲಾಗಿದೆ.

ರಾಜ್ಯದಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಹೋಲಿಸಿದಲ್ಲಿ, ದಕ್ಷಿಣ ಕರ್ನಾಟಕ ಭಾಗವು ಹೆಚ್ಚು ನಗರೀಕರಣಗೊಂಡಿದೆ. ಉತ್ತರ ಕರ್ನಾಟಕ ಭಾಗವು ಹೆಚ್ಚು ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಿದ್ದು, ಹಲವಾರು ಕಾರಣಗಳಿಂದ ನಗರೀಕರಣಗೊಳ್ಳುವ ನಿಟ್ಟಿನಲ್ಲಿ ಅಭಿವೃದ್ಧಿ ಹೊಂದದಿರುವುದನ್ನು ಮನಗಂಡು, ಈ ಭಾಗದ ಪ್ರಾದೇಶಿಕ ಅಸಮತೋಲನವನ್ನು ಸರಿದೂಗಿಸಲು ಸರ್ಕಾರವು ಕ್ಫಿ ನಂಜುಂಡಪ್ಪ ವರದಿಯನ್ನು ಜಾರಿಗೆ ತಂದಿದೆ. ಈ ಹಿನ್ನೆಲೆಯಲ್ಲಿ, ಇಂಧನ ಇಲಾಖೆಯು ಈವರೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಒಟ್ಟು 681 ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳ ನೀರಾವರಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ತನ್ನು ಪೂರೈಸಲು ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ 11 ಕೆ.ವಿ. ಸಾಮರ್ಥ್ಯದ 889 ಫೀಡರ್‌ಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ರಾಜ್ಯದ ವಾರ್ಷಿಕ ವಿದ್ಯುಚ್ಛಕ್ತಿ ಬಳಕೆಯಲ್ಲಿ ಶೇಕಡಾ 32 ರಷ್ಟು ವಿದ್ಯುತ್ ಉತ್ತರ ಕರ್ನಾಟಕ ಭಾಗದಲ್ಲಿ ಬಳಕೆಯಾಗುತ್ತಿದೆ.

2013ರಲ್ಲಿ ಬಂಡವಾಳ ಹೂಡಿಕೆ ಉದ್ದೇಶಿತ ಶ್ರೇಣಿಯಲ್ಲಿ 11ನೇ ಸ್ಥಾನದಲ್ಲಿದ್ದ ರಾಜ್ಯವನ್ನು ಪ್ರಸ್ತುತ ಮೊದಲನೇ ಸ್ಥಾನಕ್ಕೆ ತಂದಿರುವುದು ಸಾಧನೆಯ ವಿಷಯವಾಗಿದೆ. 2017ನೇ ವರ್ಷದಲ್ಲಿ ಸೆಪ್ಟೆಂಬರ್ ಅಂತ್ಯದವರೆಗೆ ರೂ.147625 ಕೋಟಿ ಬಂಡವಾಳ ಹೂಡಿಕೆ ಉದ್ದೇಶ ಹೊಂದಲಾಗಿದೆ.

ರಾಜ್ಯದ ಕೈಗಾರಿಕೆ ನೀತಿ 2014–19ರ ಪ್ರಕಾರ 5 ಲಕ್ಷ ಕೋಟಿ ಬಂಡವಾಳ ಆಕರ್ಷಣೆಯೊಂದಿಗೆ 15 ಲಕ್ಷ ಜನರಿಗೆ ಉದ್ಯೋಗಾವಕಾಶ ನೀಡುವ ಗುರಿಯನ್ನು ಹೊಂದಲಾಗಿತ್ತು. ಅದರಲ್ಲಿ ಈಗಾಗಲೇ ಅನುಮೋದನೆ ನೀಡಿರುವ 1823 ಬೃಹತ್ ಕೈಗಾರಿಕಾ ಯೋಜನೆಗಳಿಂದ 3.34 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 8.98 ಲಕ್ಷ ಉದ್ಯೋಗ ದೊರೆಯಲಿದೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಬೃಹತ್ ಕೈಗಾರಿಕೆ ಮತ್ತು ಎಂಎಸ್‌ಎಂಇ ಕೈಗಾರಿಕೆಗಳಲ್ಲಿ ಒಟ್ಟು 14.19 ಲಕ್ಷ ಜನರಿಗೆ ಉದ್ಯೋಗ ದೊರೆಕಿಸಿದ್ದು, 60,422 ಕೋಟಿ ರೂ.ಬಂಡವಾಳ ಹೂಡಿಕೆಯಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ 2013–14ರಿಂದ ಒಟ್ಟು 48,043 ಎಂಎಸ್‌ಎಂಇ ಘಟಕಗಳ ಸ್ಥಾಪನೆಗೆ ಕ್ರಮವಹಿಸಿದ್ದು, 10,514 ಕೋಟಿ ರೂ. ಹೂಡಿಕೆಯ 42 ಬೃಹತ್ ಕೈಗಾರಿಕೆ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು,.81,178 ಕೋಟಿ ರೂ

ಹೂಡಿಕೆಯ 136 ಯೋಜನೆಗಳು ಅನುಷ್ಠಾನದ ಹಂತದಲ್ಲಿವೆ. ಇವುಗಳಿಂದ 65,230 ಉದ್ಯೋಗ ಸೃಜನೆ ಆಗಲಿದೆ.

ಉತ್ತರ ಕರ್ನಾಟಕ ಭಾಗದ ಆರೋಗ್ಯ ಸಂಸ್ಥೆಗಳನ್ನು ಬಲಪಡಿಸುವುದರೊಂದಿಗೆ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಿರುವುದರಿಂದ 2013ರಲ್ಲಿ 26 ಇದ್ದ ಶಿಶು ಮರಣ ಪ್ರಮಾಣವನ್ನು 2017ರಲ್ಲಿ 18ಕ್ಕೆ ಇಳಿಕೆ ಮಾಡಲಾಗಿದೆ. ಅದೇ ರೀತಿ ತಾಯಿ ಮರಣ ಪ್ರಮಾಣವನ್ನು 160 ರಿಂದ 120ಕ್ಕೆ ಇಳಿಕೆ ಮಾಡಲಾಗಿದೆ. ಲಸಿಕೆ ಪ್ರಮಾಣವನ್ನು ಶೇ.88ಕ್ಕೆ ಏರಿಕೆ ಮಾಡಲಾಗಿದೆ. ಅಲ್ಲದೆ, 109 ಆರೋಗ್ಯ ಉಪ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಅಂತೆಯೇ, 82 ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಿಸಲಾಗಿದೆ. ಉಳಿದಂತೆ 506 ಸಮುದಾಯ ಆರೋಗ್ಯ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗಿದೆ ಮತ್ತು 110 ತಜ್ಞ ವೈದ್ಯರನ್ನು ಬಿಡ್ಡಿಂಗ್ ಮುಖಾಂತರ ನೇಮಿಸಿಕೊಳ್ಳಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಹೈದ್ರಾಬಾದ್-ಕರ್ನಾಟಕ ಕೋಟಾದಡಿ 780 ಎಂಬಿಬಿಎಸ್ ಸೀಟುಗಳನ್ನು ಮೀಸಲಿಟಿದ್ದು ಇತರೆ ಕೋಟಾದ ಸೀಟುಗಳು ಸೇರಿದಂತೆ ಒಟ್ಟು 1237 ಎಂಬಿಬಿಎಸ್ ಸೀಟುಗಳನ್ನು ಆ ಭಾಗದ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗಿದೆ. ಅದೇ ರೀತಿ ದಂತ ವೈದ್ಯಕೀಯ ವಿಷಯದಲ್ಲಿ 193 ಸೀಟುಗಳನ್ನು ಮೀಸಲಿಟ್ಟಿದ್ದು, 156 ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗಿದೆ. ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಲ್ಲಿ 186 ಸೀಟುಗಳನ್ನು ಮೀಸಲಿಟ್ಟಿದ್ದು, 276 ಸೀಟುಗಳನ್ನು ಹಂಚಿಕೆ ಮಾಡಲಾಗಿದೆ.

ಭೋದಕರಿಗೆ ಗುಣ ಮಟ್ಟದ ತರಬೇತಿಯನ್ನು ನೀಡುವುದಕ್ಕಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಉನ್ನತ ಶಿಕ್ಷಣ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತಡಕಲ್ ಗ್ರಾಮದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ರೂ.85 ಕೋಟಿಗಳ ವೆಚ್ಚದಲ್ಲಿ ಇನ್‌ಕ್ಯುಬೇಷನ್ ಕೇಂದ್ರ ಹಾಗೂ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ. ಉತ್ತರ ಕರ್ನಾಟಕ ಪ್ರಾಂತ್ಯದ 64 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆ ಪ್ರಾವೀಣ್ಯತೆ ಉತ್ತಮಗೊಳಿಸಲು ಟೆಲಿ ಶಿಕ್ಷಣ ನೀಡಲಾಗುತ್ತಿದೆ.

ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ವಿಶೇಷ ಘಟಕ ಯೋಜನೆಯಡಿ ಜನಸಂಖ್ಯೆಗೆ ಅನುಗುಣವಾಗಿ ಕಳೆದ ಐದು ವರ್ಷಗಳಲ್ಲಿ 84,000 ಕೋಟಿ ರೂ ನಿಗದಿಪಡಿಸಿದೆ.

ಈ ವರ್ಷ 27,000 ಕೋಟಿ ರೂ ಮೀಸಲಿರಿಸಲಾಗಿದೆ. ವ್ಯರ್ಥವಾಗುವುದಿಲ್ಲ. ಆಯಾ ವರ್ಷವೇ ಹಣ ವೆಚ್ಚ ಮಾಡಲು ಕಾನೂನು ಜಾರಿ ಮಾಡಲಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ 1908 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ ನಿಲಯ / ವಸತಿ ಶಾಲೆಗಳ 1.46 ಲಕ್ಷ ವಿದ್ಯಾರ್ಥಿಗಳಿಗೆ ಬೋಜನಾ ವೆಚ್ಚ ಮತ್ತು ಸಮವಸ್ತ್ರ, ಪುಸ್ತಕ ಇತ್ಯಾದಿಗಳಿಗೆ ಒಟ್ಟು ರೂ.1260.48 ಕೋಟಿ ವೆಚ್ಚ ಮಾಡಲಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರಿಗೆ ಮೂಲಭೂತ ಸೌಲಭ್ಯ ಮತ್ತು ಸಾಲ ಸೌಲಭ್ಯ ಕಾರ್ಯಕ್ರಮಗಳಿಗಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟಾರೆ 3641.87 ಕೋಟಿ ರೂ. ವೆಚ್ಚ ಮಾಡಲಾಗಿದೆ.

ರಾಜ್ಯದಲ್ಲಿ 2010–11ರ ಅಪೌಷ್ಠಿಕ ಮಕ್ಕಳ ಪ್ರಮಾಣ ಶೇ.2.84 ರಷ್ಟು ಇರುವುದನ್ನು ಅಕ್ಟೋಬರ್ 2017ರ ಅಂತ್ಯಕ್ಕೆ ಶೇಕಡಾ 0.47 ರಷ್ಟು ಇಳಿಸಲಾಗಿದೆ. ಮಕ್ಕಳ ತೀವ್ರ ಅಪೌಷ್ಠಿಕತೆ ಹೋಗಲಾಡಿಸಲು ಸರ್ಕಾರವು ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರದ ಜೊತೆಗೆ ಕ್ಷೀರ ಭಾಗ್ಯ ಯೋಜನೆಯಡಿ ಹಾಲು ಮತ್ತು ತೀವ್ರ ಅಪೌಷ್ಠಿಕ ಮಕ್ಕಳಿಗೆ ಹಾಲಿನೊಂದಿಗೆ ಮೂರು ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. **ಐದು** ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ ಮತ್ತು ಯಾದಗಿರಿಯ ಸಾಧಾರಣಾ ಪೌಷ್ಠಿಕತೆ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರದ ಜೊತೆ 3 ದಿನ ಮೊಟ್ಟೆ ಮತ್ತು 3 ದಿನ 200 ಎಂಎಲ್ ಹಾಲು ನೀಡುತ್ತಿದ್ದು, ಮೊಟ್ಟೆ ತಿನ್ನದ ಮಕ್ಕಳಿಗೆ ಆರು ದಿನಗಳು ಹಾಲನ್ನು ನೀಡಲಾಗುತ್ತಿದೆ.

ಮಾತೃ ಪೂರ್ಣ ಯೋಜನೆಯಡಿ ಗರ್ಭಿಣಿ/ಬಾಣಂತಿಯರಿಗೆ ಅನ್ನ, ಸಾಂಬಾರ್, ಪಲ್ಯ, ಮೊಟ್ಟೆ, ಹಾಲು, ಬೆಲ್ಲ ಮತ್ತು ಕಡಲೆಬೀಜದ ಚಿಕ್ಕಿ, ಮೊಳಕೆ ಕಾಳುಗಳನ್ನು ಒಳಗೊಂಡ ಪೌಷ್ಠಿಕ ಊಟವನ್ನು ನೀಡಲಾಗುತ್ತಿದೆ.

2013–14ನೇ ಸಾಲಿನಿಂದ ನಮ್ಮ ಸರ್ಕಾರವು ರಾಜ್ಯಾದ್ಯಂತ ಹೊಸದಾಗಿ 112 ಐಟಿಐ ಕಾಲೇಜುಗಳನ್ನು ಪ್ರಾರಂಭಿಸಲಾಗಿದ್ದು, ಅವುಗಳಲ್ಲಿ 60 ಐಟಿಐಗಳನ್ನು ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಕೌಶಲ್ಯ ಕರ್ನಾಟಕ ಯೋಜನೆಯಡಿ ರಾಜ್ಯದ ಗುರಿಯಾದ 5 ಲಕ್ಷಗಳ ಪೈಕಿ ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಪ್ರಸಕ್ತ ಸಾಲಿನಲ್ಲಿ 2.03 ಲಕ್ಷ ತರಬೇತಿಯ ಗುರಿ ನಿಗಧಿಪಡಿಸಲಾಗಿದೆ.

ಸಾಮಾಜಿಕ ಹೊಣೆಗಾರಿಕೆಯಡಿ ರಾಜ್ಯದ 4 ಸಾರಿಗೆ ಸಂಸ್ಥೆಗಳು ಸುಮಾರು 18 ಲಕ್ಷ ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್ ಪಾಸ್‌ಗಳನ್ನು ನೀಡುತ್ತಿದ್ದು, ಅವುಗಳಲ್ಲಿ ವಾಯವ್ಯ ಮತ್ತು ಈಶಾನ್ಯ ಸಾರಿಗೆ ಸಂಸ್ಥೆಗಳು 8.3 ಲಕ್ಷ ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸ್ ನೀಡಿವೆ.

ಇದಕ್ಕಾಗಿ ಈ ಸರ್ಕಾರವು 3354 ಕೋಟಿ ರೂ. ಅನುದಾನ ನೀಡಿದೆ. 2017–18ನೇ ಸಾಲಿನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲಾಗುತ್ತಿದೆ.

ವಿಶೇಷ ಅಭಿವೃದ್ಧಿ ಯೋಜನೆಯಡಿ ವಾಯವ್ಯ ಮತ್ತು ಈಶಾನ್ಯ ಸಾರಿಗೆ ಸಂಸ್ಥೆಗಳಿಗೆ ಒಟ್ಟು 250 ಕೋಟಿಗಳ ಅನುದಾನವನ್ನು ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿದೆ. ಈ ಸರ್ಕಾರವು ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಒಟ್ಟು 4955 ಹೊಸ ಬಸ್‌ಗಳನ್ನು ಸೇರ್ಪಡೆ ಮಾಡಲಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ 4 ಹೊಸ ಬಸ್ ಘಟಕ ಮತ್ತು 40 ಹೊಸ ಬಸ್ ನಿಲ್ದಾಣಗಳನ್ನು ನಿರ್ಮಾಣ ಮಾಡಿದೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಷ್ಟವನ್ನು ಸುಧಾರಿಸಿ ಸಂಸ್ಥೆಯನ್ನು ಬಲಪಡಿಸುವ ಹಿನ್ನೆಲೆಯಲ್ಲಿ ಸರ್ಕಾರದಿಂದ ನೀಡಲಾಗಿದ್ದ 5 ವರ್ಷಗಳ ಮೋಟಾರು ವಾಹನ ತೆರಿಗೆ ಪಾವತಿ ವಿನಾಯಿತಿ ಅವಧಿಯು ನವಂಬರ್–2017ಕ್ಕೆ ಮುಕ್ತಾಯಗೊಳ್ಳಲಿದ್ದು ಮತ್ತೆ 5 ವರ್ಷಗಳಿಗೆ ವಿಸ್ತರಿಸುವ ಮತ್ತು ಈಶಾನ್ಯ ಸಾರಿಗೆ ಸಂಸ್ಥೆಗೂ ವಿನಾಯಿತಿ ನೀಡುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದ ಸಿದ್ದರಾಮಯ್ಯ ಅವರು ಉತ್ತರ ಕರ್ನಾಟಕ ಅಭಿವೃದ್ಧಿ ಪರ ಇರುವ ತಮ್ಮ ಸರ್ಕಾರದ ಕಾಳಜಿಯನ್ನು ಅಭಿವ್ಯಕ್ತಿಗೊಳಿಸಿದರು.

**ಬೆಳಗಾವಿ ವಿಭಜನೆ ಅನಿವಾರ್ಯ**

ರಾಜ್ಯದಲ್ಲೇ ಬೆಳಗಾವಿ ಅತಿ ದೊಡ್ಡ ಜಿಲ್ಲೆಯಾಗಿದೆ. ಪರಿಣಾಮಕಾರಿ ಆಡಳಿತ ಹಿತದೃಷ್ಟಿಯಿಂದ ಇದನ್ನು ವಿಭಜನೆ ಮಾಡುವುದು ಅನಿವಾರ್ಯ. ಈ ಹಿಂದೆ ಜಿಲೆಗಳ ಪುನರ್ವಿಂಗಡನೆಯ ಸಂದರ್ಭದಲ್ಲಿ ಒಮ್ಮತ ಮೂಡದ ಕಾರಣ ವಿಭಜನಾ ಕಾರ್ಯ ಸ್ಥಗಿತಗೊಂಡಿತ್ತು. ಈ ಜಿಲ್ಲೆಯನ್ನು ಎರಡು ಅಥವಾ ಮೂರು ಜಿಲ್ಲೆಯನ್ನಾಗಿ ವಿಭಜಿಸುವುದು ಅನಿವಾರ್ಯ ಎಂದು ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

************

**ಡಿ ಪಿ ಎಂ**